ಪೆಟ್ರೋಲ್ ಮತ್ತು ಡೀಜಲ್ ಮೇಲಿನ ಮಾರಾಟ ತೆರಿಗೆ.

3117 - ಶ್ರೀ ಕೆ.ಲಕ್ಕಪ್ಪ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪೆಟ್ರೋಲ್ ಮತ್ತು ಡೀಜಲ್ ಮೇಲಿನ ಮಾರಾಟ ತೆರಿಗೆಯಿಂದ ಕರ್ನಾಟಕ ಸರ್ಕಾರಕ್ಕೆ ಬರಬೇಕಾಗಿರುವ ಮೊತ್ತ ಎಷ್ಟು?*

ಆ) *ಭಾರತ ಸರ್ಕಾರದಿಂದ ಈ ಮೊತ್ತವನ್ನು ಯಾವ ಅವಧಿಯಿಂದ ಪಡೆದಿರುವುದಿಲ್ಲ?*

ಇ) *ಈ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ತೆಗೆದುಕೊಂಡಿರುವ ಕ್ರಮಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಬಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಸಂಸ್ಥೆಯಿಂದ ಮಾತ್ರ ರೂ. 1,84,591-00 ಹಳೇ ಬಾಕಿ ಇದ್ದು, ಇದು ವಾಣಿಜ್ಯ ತೆರಿಗೆ ಉಪ ಆಯುಕ್ತರು (ಮನವಿಗಳು) ಬೆಂಗಳೂರು, ಇವರು ನೀಡಿರುವ ತಡೆಯಾಜ್ಞೆಯಿಂದ ಅವೃತವಾಗಿರುತ್ತದೆ.

ಆ) ಭಾರತ ಸರ್ಕಾರವು ಪೆಟ್ರೋಲ್ ಹಾಗೂ ಡೀಜಲ್ ಮೇಲೆ ಯಾವ ತೆರಿಗೆಯನ್ನೂ ನೀಡುತ್ತಿಲ್ಲ. ಆದ್ದರಿಂದ ಯಾವ ಮೊತ್ತವನ್ನು ಭಾರತ ಸರ್ಕಾರದಿಂದ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಸ್ತುತ ಯಾವುದೇ ಕ್ರಮ ಕೈಗೊಳ್ಳಬೇಕಾಗಿರುವುದಿಲ್ಲ. ಮನವಿಯನ್ನು ಇತ್ಯರ್ಥಪಡಿಸಿದ ಕೂಡಲೇ ಬಾಕಿಯು ವಸೂಲಿಗೆ ಬದ್ದವಾಗುತ್ತದೆ ಸದರಿ ಬಾಕಿಯನ್ನು ಮೇಲೆ ಹೇಳಲಾದ ಎಣ್ಣೆ ನಿಗಮದದಿಂದ ವಸೂಲಿ ಮಾಡಲು ಯಾವ ಭಾದಕವೂ ಇರುವುದಿಲ್ಲ.

ರಾಜ್ಯದಲ್ಲಿರುವ ಒಟ್ಟು ಮಹಿಳಾ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳ ಸಂಖ್ಯೆ

3173 - ಶ್ರೀ ಕೆ.ಲಕ್ಕಪ್ಪ (ಕುಣಿಗಲ್) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಒಟ್ಟು ಮಹಿಳಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳ ಸಂಖ್ಯೆ.*

ಆ) *ಮಹಿಳಾ ಪೋಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳಿಗೆ ನಂತರ ಯಾವುದೇ ಸೇವಾ ಮುಂಬಡ್ತಿ ಸೌಲಭ್ಯ ಒದಗಿಸಲಾಗಿಲ್ಲವೆಂಬುದು ನಿಜವೇ.*

ಇ) *ಹಾಗಿದ್ದಲ್ಲಿ, ಸರ್ಕಾರವು ಅವರಿಗೆ ಪುರುಷರಿಗೆ ಸರಿಸಮನಾಗಿ ಮುಂಬಡ್ತಿ ಸೌಲಭ್ಯ ಒದಗಿಸಲು ಕ್ರಮ ಜರುಗಿಸುವುದೇ.*

ಧರ್ಮಸಿಂಗ್ (ಗೃಹ ಸಚಿವರು) :

ಅ) ೩೬

ಆ) ಇಲ್ಲಾ.

ಇ) ಉದ್ಭವಿಸುವುದಿಲ್ಲ.

ಗುಲ್ಬರ್ಗಾದಲ್ಲಿ ನಡೆದ ಮಾಜಿಪ್ರಧಾನ ಮಂತ್ರಿಗಳ ಸಾರ್ವಜನಿಕ ಸಭೆಯಲ್ಲಿ ಧ್ವನಿವರ್ಧಕ ವ್ಯವಸ್ಥೆ ವಿಫಲತೆ.

3172 - ಶ್ರೀ ಕೆ.ಲಕ್ಕಪ್ಪ (ಕುಣಿಗಲ್) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?